ಅನುಬಂಧ – ಅ

2007ನೇ ವರ್ಷದಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ನೇಮಕಹೊಂದಿರುವ ಬೋಧಕರ ವೃಂದವಾರು ವಿವರಣಾ ಪಟ್ಟಿ

ಕ್ರ.ಸಂ.	ಪದನಾಮ	ವೃಂದವಾರು ನೇಮಕವಾದವರುಗಳ ಸಂಖ್ಯೆ								ಒಟ್ಟು
		GM	SC	ST	CAT I	II A	II B	III A	III B	
1	ಪ್ರಾಧ್ಯಪಕರು	05	01	–	01	02	–	01	–	10
2	ಪ್ರವಾಚಕರು	05	02	01	–	03	01	08	03	23
3	ಉಪನ್ಯಾಸಕರು (ಪಿ.ಜಿ.)	18	10	02	03	05	–	02	01	41
4	ಉಪನ್ಯಾಸಕರು (ಯು.ಜಿ)	23	08	01	04	02	01	01	–	40
	ಒಟ್ಟು	**51**	**21**	**04**	**08**	**12**	**02**	**12**	**04**	**114**

ಅಂಗವಿಕಲರ ವೇತನ

257 (732) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) :– ಮಾನ್ಯ ಉಪ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿ ಅಂಗವಿಕಲರ ವೇತನ ಪಡೆಯುತ್ತಿರುವವರ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

ಆ) ಇದರಲ್ಲಿ ಮಹಿಳೆಯರ ಮತ್ತು ಪುರಷರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಇ) ಈ ಯೋಜನೆಯಿಂದ ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗುತ್ತಿರುವ ಮೊತ್ತವೆಷ್ಟು;

ಈ) ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಭರಿಸುತ್ತಿರುವ ಮೊತ್ತವೆಷ್ಟು? (ವಿವರ ನೀಡುವುದು)

ಶ್ರೀ ಕೆ.ಎಸ್. ಈಶ್ವರಪ್ಪ (ಮಾನ್ಯ ಉಪ ಮುಖ್ಯಮಂತ್ರಿ) :

ಅ) ರಾಜ್ಯದಲ್ಲಿ 580833 ರಷ್ಟು ಫಲಾನುಭವಿಗಳು ಅಂಗವಿಕಲ ವೇತನದಡಿ ಮಾಸಾಶನ ಪಡೆಯುತ್ತಿರುತ್ತಾರೆ.

(ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ)

ಆ) ಅಂಗವಿಕಲ ವೇತನದಡಿ **249874** ಮಹಿಳೆಯರು ಹಾಗೂ **330959** ಪುರುಷರು ವೇತನವನ್ನು ಪಡೆಯುತ್ತಿರುತ್ತಾರೆ.

(ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ)

ಇ) ಅಂಗವಿಕಲ ವೇತನ ಯೋಜನೆಯಿಂದ ಸರ್ಕಾರದ ಬೊಕ್ಕಸಕ್ಕೆ ಮಾಸಿಕ ಸುಮಾರು ರೂ.35 ಕೋಟಿಗಳಷ್ಟು ವೆಚ್ಚವಾಗುತ್ತಿದೆ.

ಈ) ಈ ಯೋಜನೆಯಡಿ 56,000/- ಫಲಾನುಭವಿಗಳಿಗೆ ಮಾತ್ರ ಕೇಂದ್ರ ಸರ್ಕಾರವು ರೂ. 300 ಗಳ ಮಾಸಿಕ ಅನುದಾನವನ್ನು ಒದಗಿಸುತ್ತಿರುತ್ತದೆ. ಸದರಿ ಯೋಜನೆಗೆ ವಾರ್ಷಿಕ ರೂ.420/- ಕೋಟಿಗಳಷ್ಟು ವೆಚ್ಚವಾಗುತ್ತಿದ್ದು, ಇದರಲ್ಲಿ 20 ಕೋಟಿಗಳನ್ನು ಕೇಂದ್ರ ಸರ್ಕಾರ ಭರಿಸುತ್ತಿದೆ ಹಾಗೂ ರೂ. 400/- ಕೋಟಿಗಳನ್ನು ರಾಜ್ಯ ಸರ್ಕಾರ ಭರಿಸುತ್ತಿದೆ.

ಅನುಬಂಧ ಪ್ರಶ್ನೆ ಸಂಖ್ಯೆ: 732

ಫಲಾನುಭವಿಗಳ ವಿವರ

ಕ್ರ.ಸಂ.	ಜಿಲ್ಲೆ ಹೆಸರು	ಪುರುಷ ಅಂಗವಿಕಲ ಫಲಾನುಭವಿಗಳು	ಮಹಿಳಾ ಅಂಗವಿಕಲ ಫಲಾನುಭವಿಗಳು	ಒಟ್ಟು ಅಂಗವಿಕಲ ಫಲಾನುಭವಿಗಳು
1	ಬಾಗಲಕೋಟೆ	12641	11263	23904
2	ಬೆಂಗಳೂರು ನಗರ	6614	4094	10708
3	ಬೆಂಗಳೂರು ಗ್ರಾಮಾಂತರ	4944	2745	7689

4	ಬೆಳಗಾಂ	25763	22495	48258
5	ಬಳ್ಳಾರಿ	15611	9032	24643
6	ಬೀದರ್	11474	7555	19029
7	ಬಿಜಾಪುರ	13429	10412	23841
8	ಚಾಮರಾಜನಗರ	13269	4023	17292
9	ಚಿಕ್ಕಮಗಳೂರು	5303	4205	9508
10	ಚಿಕ್ಕಬಳ್ಳಾಪುರ	7433	4752	12185
11	ಚಿತ್ರದುರ್ಗ	17543	7148	24691
12	ದಕ್ಷಿಣ ಕನ್ನಡ	8212	6486	14698
13	ದಾವಣಗೆರೆ	9923	6923	16846
14	ಧಾರವಾಡ	13106	10396	23502
15	ಗದಗ	12638	8983	21621
16	ಗುಲ್ಬರ್ಗಾ	8594	22139	30733
17	ಹಾಸನ	13526	9799	23325
18	ಹಾವೇರಿ	15899	10473	26372
19	ಕೊಡಗು	2292	1817	4109
20	ಕೋಲಾರ	10160	7152	17312
21	ಕೊಪ್ಪಳ	10168	6971	17139
22	ಮಂಡ್ಯ	16958	12677	29635
23	ಮೈಸೂರು	15640	10826	26466
24	ರಾಯಚೂರು	8068	5684	13752
25	ರಾಮನಗರ	7921	5977	13898
26	ಶಿವಮೊಗ್ಗ	9301	7122	16423
27	ತುಮಕೂರು	18295	13327	31622

28	ಉಡುಪಿ	5970	5936	11906
29	ಉತ್ತರಕನ್ನಡ	6954	4806	11760
30	ಯಾದಗಿರಿ	3310	4656	7966
	ಒಟ್ಟು	**330959**	**249874**	**580833**

ಸಾರ್ವಜನಿಕ ಗ್ರಂಥಾಲಯಗಳಲ್ಲಿ ನ್ಯೂನ್ಯತೆಗಳು

263 (904) ಶ್ರೀ ನರೇಂದ್ರ ಬಾಬು ನೆ.ಲ. (ಮಹಾಲಕ್ಷ್ಮಿ ಲೇ–ಔಟ್) :– ಮಾನ್ಯ ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮಹಾಲಕ್ಷ್ಮಿ ಬಡಾವಣೆ ವಿಧಾನಸಭಾ ಕ್ಷೇತ್ರದಲ್ಲಿರುವ ಸಾರ್ವಜನಿಕ ಗ್ರಂಥಾಲಯಗಳೆಷ್ಟು? (ವಿವರ ನೀಡುವುದು)

ಆ) ಈ ಗ್ರಂಥಾಲಯಗಳಲ್ಲಿ ಓದುಗರಿಗೆ ಸರಿಯಾದ ಪೀಠೋಪಕರಣಗಳು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಪೀಠೋಪಕರಣ ಸರಬರಾಜು ಮಾಡಲು ಕೈಗೊಂಡ ಕ್ರಮಗಳೇನು;

ಇ) ಗ್ರಂಥಾಲಯಗಳಲ್ಲಿ ಹಳೆಯ ಪುಸ್ತಕಗಳೇ ಹೆಚ್ಚಾಗಿದ್ದು ಅದನ್ನು ಬದಲಿಸಲು ಕ್ರಮ ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು; (ಮಾಹಿತಿ ನೀಡುವುದು)

ಈ) ಗ್ರಂಥಾಲಯಗಳಲ್ಲಿ ಮೂಲಭೂತ ಸೌಕರ್ಯ ಕಲ್ಪಿಸದೇ ಇರುವುದಕ್ಕೆ ಕಾರಣವೇನು; ಯಾವಾಗ ಈ ಸೌಕರ್ಯಗಳನ್ನು ಕಲ್ಪಿಸಲಾಗುವುದು?

ಶ್ರೀ ರೇವೂನಾಯಕ್ ಬೆಳಮಗಿ (ಲೋಕ ಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು) :

ಅ) 1. ನಂದಿನಿ ಬಡಾವಣೆ ಶಾಖಾ ಗ್ರಂಥಾಲಯ

2. ಗೆಳೆಯರ ಬಳಗ ಸೇವಾ ಕೇಂದ್ರ ಗ್ರಂಥಾಲಯ

3. ಮಹಾಲಕ್ಷ್ಮೀಪುರಂ ಸೇವಾ ಕೇಂದ್ರ ಗ್ರಂಥಾಲಯ

4. ಬಯಲುರಂಗಮಂದಿರ ಸೇವಾ ಕೇಂದ್ರ ಗ್ರಂಥಾಲಯ

5. ನಾಗಪುರ ವಾಚನಾಲಯ